**ಶ್ರೀ ಸುಬೋಧ್ ಯಾದವ್, ಭಾ.ಆ.ಸೇ, ರಾಜ್ಯ ಯೋಜನಾ ನಿರ್ದೇಶಕರು, ಎಸ್‌ಎಸ್‌ಎ/ಆರ್‌ಎಂಎಸ್‌ಎ ಇವರು ದಿನಾಂಕ: 19.03.2013 ರಂದು ರಾಮನಗರ ಜಿಲ್ಲೆಗೆ ನೀಡಿದ ಭೇಟಿ ವರದಿ.**

*****

- **ಎಸ್‌ಆರ್‌ಪಿ ಕೇಂದ್ರ, ಬಿಆರ್‌ಸಿ ಕೇಂದ್ರದ ಆವರಣ, ಮಾಗಡಿ ತಾಲ್ಲೂಕು & ಟೌನ್, ರಾಮನಗರ ಜಿಲ್ಲೆ** :- ಈ ಕೇಂದ್ರಕ್ಕೆ ಭೇಟಿ ನೀಡಲಾಯಿತು. 5 ಮಕ್ಕಳು ಹಾಜರಿದ್ದರು. ಈ ಮಕ್ಕಳನ್ನು ಶಾಲೆಗೆ ದಾಖಲಿಸುವ ವ್ಯವಸ್ಥೆ ಮಾಡುವ ಕುರಿತು ಕ್ರಮ ವಹಿಸಲು ಬಿಇಒ/ಬಿಆರ್‌ಸಿ ಅವರಿಗೆ ಸೂಚನೆ ನೀಡಲಾಯಿತು.

**ಕ್ರಮ : ಉಪನಿರ್ದೇಶಕರು (ಆ)/ಡಿವೈಪಿಸಿ**

- **ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ತಿರುಮಲೆ ಮಾಗಡಿ ಟೌನ್** :- ಇಲ್ಲಿ ನಡೆಯುತ್ತಿರುವ 12 ತಿಂಗಳ ಆರ್‌ಎಸ್‌ಟಿ ಕೇಂದ್ರಕ್ಕೆ ಭೇಟಿ ನೀಡಲಾಯಿತು. ಇಲ್ಲಿ 3, 4 ದಿವಸ ಶಾಲೆಗೆ ಹಾಜರಾಗದಿರುವ ಮಕ್ಕಳನ್ನು ದಾಖಲು ಮಾಡಿರುವುದು ಹಾಗೂ ಇದೇ ಶಾಲೆಯಲ್ಲಿ ನಿರಂತರ ವ್ಯಾಸಂಗ ಮಾಡುತ್ತಿರುವ ಮಕ್ಕಳನ್ನು 12 ತಿಂಗಳ ಆರ್‌ಎಸ್‌ಟಿ ಕೇಂದ್ರಕ್ಕೆ ಕರೆದುಕೊಂಡು ಬಂದಿರುವುದು ಮೇಲ್ನೋಟಕ್ಕೆ ತಿಳಿದು ಬಂತು. ಈ ಕಛೇರಿ ಸುತ್ತೋಲೆ ಸಂಖ್ಯೆ ಸಶಿಅ/ಒಒಎಸ್‌ಸಿ/ಸುತ್ತೋಲೆ/2012-13, ದಿನಾಂಕ: 30.05.2012 ರಲ್ಲಿ ಶಾಲೆಯಿಂದ ಹೊರಗುಳಿದ ಹಿರಿಯ ವಯಸ್ಸಿನ ಮತ್ತು ಮುಖ್ಯ ವಾಹಿನಿಗೆ ಸೇರಲು ಹೆಚ್ಚು ಸಮಯವನ್ನು ಬೇಡುವ ಮಕ್ಕಳನ್ನು ಮಾತ್ರ 12 ತಿಂಗಳ ಆರ್‌ಎಸ್‌ಟಿ ಅಡಿಯಲ್ಲಿ ತರಬೇತಿ ನೀಡಿ ಅವರ ಕಲಿಕಾ ಗುಣಮಟ್ಟಕ್ಕನುಗುಣವಾಗಿ ತರಗತಿಗೆ ದಾಖಲು ಮಾಡುವಂತೆ ಸ್ಪಷ್ಟವಾಗಿ ತಿಳಿಸಲಾಗಿದೆ. ಹಾಗಿದ್ದರೂ ಈ ಅಂಶವನ್ನು ಪರಿಶೀಲಿಸದೇ ಕೇಂದ್ರವನ್ನು ತೆರೆದು, ಸರ್ಕಾರದ ಅನುದಾನವನ್ನು ವ್ಯರ್ಥ/ದುರ್ಬಳಕೆ ಮಾಡುತ್ತಿರುವ ಬಗ್ಗೆ ಸಮಗ್ರವಾಗಿ ಪರಿಶೀಲಿಸಿ ಸಂಬಂಧಿಸಿದವರಿಗೆ ಕಾರಣ ಕೇಳಿ ನೋಟೀಸ್ ಜಾರಿ ಮಾಡಿ ಕ್ರಮ ಕೈಗೊಂಡು ವರದಿ ಮಾಡಲು ತಿಳಿಸಲಾಯಿತು. ಹಾಗೂ ಇದೇ ಶಾಲೆಯ ನಲಿ-ಕಲಿ ತರಗತಿಗೆ ಭೇಟಿ ನೀಡಿ ಪರಿಶೀಲಿಸಲಾಯಿತು. ಸದರಿ ತರಗತಿಯಲ್ಲಿ ಬೋಧಿಸುತ್ತಿದ್ದ ಶಿಕ್ಷಕರಿಗೆ ನಲಿ-ಕಲಿ ಮಾದರಿಯಲ್ಲಿ ಪಾಠ ಬೋಧನೆ ಮಾಡುವ ಸಂಪೂರ್ಣ ಸಾಮರ್ಥ್ಯ ಇಲ್ಲದಿರುವುದನ್ನು ಗಮನಿಸಲಾಯಿತು.

**ಕ್ರಮ : ಉಪನಿರ್ದೇಶಕರು (ಆ)/ಡಿವೈಪಿಸಿ**

- **ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸೋಮೇಶ್ವರ ಬಡಾವಣೆ ಮತ್ತು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ರಾಜೀವ ಗಾಂಧಿನಗರ** :- ಈ ಶಾಲೆಗಳಿಗೆ ಸರಬರಾಜಾಗಿರುವ ನಲಿ-ಕಲಿ ಸಾಮಾಗ್ರಿಗಳಲ್ಲಿ ಡೈಸ್ ಸಾಮಾಗ್ರಿಗಳು ಇಲ್ಲದಿರುವುದನ್ನು ಗಮನಿಸಿ ಪ್ರಶ್ನಿಸಲಾಗಿ ಈ ತಾಲ್ಲೂಕಿನಲ್ಲಿ ಒಟ್ಟು 191 ಶಾಲೆಗಳಿಗೆ ಇದೇ ರೀತಿ ಸರಬರಾಜಾಗಿದ್ದು, ಕ್ಲಸ್ಟರ್ ಷೇರಿಂಗ್ ಮೀಟಿಂಗ್ ಕರೆದಿದ್ದ ಅವಧಿಯಲ್ಲಿ ಈ ಅಂಶವನ್ನು ಬಿಇಒರವರ ಗಮನಕ್ಕೆ ತಂದಿರುವುದಾಗಿ ಎರಡೂ ಶಾಲೆಯ ಶಿಕ್ಷಕರು ತಿಳಿಸಿದ ಮೇರೆಗೆ, ಈ ಸಂಬಂಧ ಬಿಇಒರವರ ಗಮನಕ್ಕೆ ತಂದ ನಂತರದ ಆಗಿರುವ ಕ್ರಮಗಳ ಕುರಿತು, ಹಾಗೂ ರಾಜ್ಯ ಕಛೇರಿಗೆ ಈ ಸಂಬಂಧ ವರದಿ ಮಾಡಲಾಗಿದೆಯೇ ಎಂಬುದನ್ನು ಪರಿಶೀಲಿಸಿ ವರದಿಸಲು ಸೂಚಿಸಲಾಯಿತು.

**ಕ್ರಮ : ಸಹ ನಿರ್ದೇಶಕರು (ಗು), ಎಸ್‌ಎಸ್‌ಎ/ಉಪನಿರ್ದೇಶಕರು (ಆ)/ಡಿವೈಪಿಸಿ**

- **ಹೆಚ್‌ಬಿಇ ಕೇಂದ್ರ, ತಿರುಮಲೆ** ಇಲ್ಲಿಗೆ ಭೇಟಿ ನೀಡಲಾಯಿತು. ಮೂರು ಮಕ್ಕಳು ಹಾಜರಿದ್ದರು. ಈ ಮಕ್ಕಳಿಗೆ ನಿಮ್ಹಾನ್ಸ್ ವೈದ್ಯರಿಂದ ಚಿಕಿತ್ಸೆ ಕೊಡಿಸಲು ಸಲಹೆ ನೀಡಲಾಯಿತು.

**ಕ್ರಮ : ಡಿಡಿಪಿಐ/ಡಿವೈಪಿಸಿ/ಬಿಇಒ/ಐಇಆರ್‌ಟಿ**

- **ಹಿರಿಯ ಪ್ರಾಥಮಿಕ ಶಾಲೆ, ಸೋಮೇಶ್ವರ ಬಡಾವಣೆ ಮತ್ತು ಕಿರಿಯ ಪ್ರಾಥಮಿಕ ಶಾಲೆ, ರಾಜೀವಗಾಂಧಿನಗರ** ಈ ಶಾಲೆಗಳಿಗೆ ಭೇಟಿ ನೀಡಲಾಯಿತು. ಎಸ್‌ಎಸ್‌ಎ ಹಾಗೂ ಇನ್ನಿತರೆ ಅನುದಾನ ಬಳಕೆ ಮಾಡಿ ಶಾಲಾ ತಡೆಗೋಡೆ

ಆವರಣವನ್ನು ನಿರ್ಮಿಸಿರುವುದನ್ನು ಗಮನಿಸುವುದರ ಜೊತೆಗೆ ಶಾಲೆಯಲ್ಲಿರುವ ಮಕ್ಕಳಿಗನುಗುಣವಾಗಿ ಶೌಚಾಲಯ ನಿರ್ಮಿಸಲಾಗಿದೆಯೇ ಎಂಬುದನ್ನೂ ಸಹ ಪರಿಶೀಲಿಸಲಾಯಿತು.

- **ಜಿಲ್ಲಾ ಪಂಚಾಯತ್, ರಾಮನಗರ** ಇಲ್ಲಿಗೆ ಭೇಟಿ ನೀಡಿ, ಪ್ರಗತಿ ಪರಿಶೀಲನೆ ನಡೆಸಿ ಕುಂದು-ಕೊರತೆಗಳ ಕುರಿತು ಹಾಗೂ 2013-14 ನೇ ಸಾಲಿಗೆ ಸಿದ್ಧಪಡಿಸಲಾಗಿರುವ ವಾರ್ಷಿಕ ಕ್ರಿಯಾ ಯೋಜನೆಯ ಡಿಪಿಸಿ ಅನುಮೋದನೆ ತುರ್ತಾಗಿ ಆಗಬೇಕಾದ ಕುರಿತಂತೆ ಚರ್ಚಿಸಲಾಯಿತು. ಉಪನಿರ್ದೇಶಕರು (ಆ) ಇವರು ಎಸ್‌ಎಸ್‌ಎ ಯೋಜನೆಯಡಿಯಲ್ಲಿ ಅನುಷ್ಠಾನಗೊಳ್ಳುತ್ತಿರುವ ಎಲ್ಲಾ ಕಾರ್ಯಕ್ರಮದ ವಿವರ ಹಾಗೂ ಪ್ರಗತಿಯನ್ನು ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳವರ ಗಮನಕ್ಕೆ ಕಾಲ ಕಾಲಕ್ಕೆ ತರಲು ಸೂಚಿಸಲಾಯಿತು.

**ಕ್ರಮ : ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ರಾಮನಗರ/ಡಿಡಿಪಿಐ (ಆ)/ಡಿವೈಪಿಸಿ**

- **ಆದರ್ಶ ವಿದ್ಯಾಲಯ, ಮತ್ತಿಕೆರೆ-ಶೆಟ್ಟಿಹಳ್ಳಿ,** ಇಲ್ಲಿಗೆ ಭೇಟಿ ನೀಡಿ ಪರಿಶೀಲಿಸಲಾಗಿ, ಮಕ್ಕಳು ಶಾಲಾ ಮೈದಾನದಲ್ಲಿ ನೆಲದ ಮೇಲೆ ಕುಳಿತು ಗುಂಪು ಅಧ್ಯಯನ ಮಾಡುತ್ತಿರುವುದನ್ನು ಗಮನಿಸಲಾಯಿತು. ಸದರಿ ಶಾಲೆಯಲ್ಲಿ ಸ್ಥಳಾವಕಾಶದ ಕೊರತೆ ಇದ್ದಲ್ಲಿ ಪಕ್ಕದ ಶಾಲೆಯಲ್ಲಿರುವ ಶಾಲಾ ಕೊಠಡಿಯಲ್ಲಿ ಮಕ್ಕಳಿಗೆ ಆಸನದ ವ್ಯವಸ್ಥೆ ಮಾಡಿಕೊಂಡು ಪಾಠ-ಪ್ರವಚನ ನಡೆಸಲು, ಯಾವುದೇ ಸಂದರ್ಭದಲ್ಲಿ ಮಕ್ಕಳು ನೆಲದ ಮೇಲೆ, ಬಯಲು ಪ್ರದೇಶದಲ್ಲಿ ಕುಳಿತುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗದಂತೆ ಕ್ರಮ ವಹಿಸಲು ತಿಳಿಸಲಾಯಿತು. ಅಲ್ಲದೆ ಈ ಶಾಲೆಗೆ ಕಟ್ಟಡ ನಿರ್ಮಾಣಕ್ಕಾಗಿ ಕಾರ್ಯಾದೇಶ ನೀಡಿದ್ದು, ಈ ಬಗ್ಗೆ ತುರ್ತು ಕ್ರಮ ವಹಿಸಲು ಸ್ಪಷ್ಟ ಸೂಚನೆ ನೀಡಲಾಯಿತು.

**ಕ್ರಮ : ಉಪನಿರ್ದೇಶಕರು (ಆ)/ಡಿವೈಪಿಸಿ**

- **ಸರ್ಕಾರಿ ಪ್ರೌಢ ಶಾಲೆ, ಬೈರಾಪಟ್ಟಣ** ಇಲ್ಲಿಗೆ ಭೇಟಿ ನೀಡಿ ಐಸಿಟಿ-2 ಕಾರ್ಯಕ್ರಮದಡಿಯಲ್ಲಿ ಸರಬರಾಜಾದ ಗಣಕ ಯಂತ್ರಗಳ ಕುರಿತು ಪರಿಶೀಲನೆ ನಡೆಸಲಾಯಿತು. ಇಂಟರ್‌ನೆಟ್ ಸೌಲಭ್ಯ ಇಲ್ಲದಿರುವುದನ್ನು ಗಮನಿಸಿ ಕೂಡಲೇ ವ್ಯವಸ್ಥೆಗೊಳಿಸಲು ಸೂಚಿಸಲಾಯಿತು.

**ಕ್ರಮ : ನಿರ್ದೇಶಕರು, ಡಿಎಸ್‌ಇಆರ್‌ಟಿ/ಸಹ ನಿರ್ದೇಶಕರು (ಕಾ), ಎಸ್‌ಎಸ್‌ಎ/ಡಿಡಿಪಿಐ (ಆ)/ಡಿವೈಪಿಸಿ**

- **ಕೆಜಿಬಿವಿ, ಬೈರಾಪಟ್ಟಣ** ಇಲ್ಲಿಗೆ ಭೇಟಿ ನೀಡಿದಾಗ ಮಕ್ಕಳ ದಾಖಲಾತಿಯಲ್ಲಿ ನಿಗಧಿತ ಗುರಿ ಸಾಧಿಸಿರುವುದು ಕಂಡು ಬಂತು. ಹಾಸ್ಟೆಲ್‌ನಲ್ಲಿ ಪರಿಶೀಲಿಸಲಾಗಿ ಮಕ್ಕಳು ಮಲಗಲು 9 ಮಂಚಗಳು ಮಾತ್ರ ಇದ್ದು, ಇನ್ನುಳಿದ ಮಕ್ಕಳಿಗೆ ಮಂಚದ ವ್ಯವಸ್ಥೆ ಇಲ್ಲದಿರುವುದನ್ನು ಗಂಭೀರವಾಗಿ ಪರಿಗಣಿಸಲಾಯಿತು. ಹಾಸಿಗೆಗಳು ಬಹಳಷ್ಟು ಹಳೆಯದಾಗಿದ್ದು, ಕೂಡಲೇ ಬದಲಾಯಿಸಲು ಕ್ರಮ ವಹಿಸಲು ತಿಳಿಸಲಾಯಿತು. ಹೊದಿಕೆಗಳನ್ನು 15 ದಿನಗಳಿಗೊಮ್ಮೆ ಮಕ್ಕಳೇ ಶುಚಿಗೊಳಿಸಿಕೊಳ್ಳುತ್ತಿರುವುದಾಗಿ ತಿಳಿದು ಬಂತು. ಇದು ವಿಷಾದನೀಯ. ಇಲಾಖೆಯಿಂದ ನೀಡುವ ಅನುದಾನದಿಂದ ಶುಚಿಗೊಳಿಸಿಕೊಳ್ಳಲು ಕ್ರಮ ವಹಿಸಲು ಸ್ಪಷ್ಟ ನಿರ್ದೇಶನ ನೀಡಲಾಯಿತು. ಅಲ್ಲದೆ ಊಟ ಉಪಾಹಾರವು ಟೆಂಡರ್ ಪ್ರಕಾರ ನಿಗಧಿಪಡಿಸಿದಂತೆ ಮಕ್ಕಳಿಗೆ ನೀಡುತ್ತಿಲ್ಲದಿರುವುದು ತಿಳಿದುಬಂತು. ಟೆಂಡರ್‌ನಲ್ಲಿ ಅನುಮೋದನೆ ಆಗಿರುವ ಪ್ರಕಾರ ಮಕ್ಕಳಿಗೆ ಊಟ, ಉಪಾಹಾರ ಒದಗಿಸಲು ಕ್ರಮ ವಹಿಸುವಂತೆ ನಿರ್ದೇಶನ ನೀಡಲಾಯಿತು.

**ಕ್ರಮ : ಉಪನಿರ್ದೇಶಕರು (ಆ)/ಡಿವೈಪಿಸಿ**

- **ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಬೈರಾಪಟ್ಟಣ** ಇಲ್ಲಿಗೆ ಭೇಟಿ ನೀಡಿ ಸಿಎಎಲ್‌ಸಿ ಕಾರ್ಯಕ್ರಮದಡಿಯಲ್ಲಿ ಸರಬರಾಜಾದ ಗಣಕ ಯಂತ್ರಗಳು ಕಾರ್ಯ ನಿರ್ವಹಿಸುತ್ತಿರುವ ಕುರಿತು ಪರಿಶೀಲನೆ ನಡೆಸಲಾಯಿತು. ಗಣಕ ಯಂತ್ರದ ಕೊಠಡಿಗೆ ಹೊಸ್ತಿಲನ್ನು ಎತ್ತರದಲ್ಲಿ ನಿರ್ಮಿಸಿದ್ದು, ಕಾರಣ ಕೇಳಲಾಗಿ ಮಳೆ ನೀರು ಕೊಠಡಿ ಒಳಗೆ ಬರುವ ಸಾಧ್ಯತೆ ಇರುವುದರಿಂದ ಈ ರೀತಿ ಮಾಡಿರುವುದಾಗಿ ಸ್ಪಷ್ಟನೆ ನೀಡಿದರು. ಇದರಿಂದ ಸಿಡಬ್ಲ್ಯೂಎಸ್‌ಎನ್ ಮಕ್ಕಳು

ಶಾಲೆಯಲ್ಲಿ ಇದ್ದಲ್ಲಿ ಒಳಗೆ ಬರಲು ಕಷ್ಟಸಾಧ್ಯವಾಗುವ ಪ್ರಯುಕ್ತ ಇದನ್ನು ತೆರವುಗೊಳಿಸಿ, ಮಳೆ ನೀರು ಸುಲಭವಾಗಿ ಹರಿದುಹೋಗುವಂತೆ ಸಿಇಒರವರನ್ನು ಸಂಪರ್ಕಿಸಿ ಚರಂಡಿ ವ್ಯವಸ್ಥೆ ಮಾಡಲು ತುರ್ತು ಕ್ರಮ ವಹಿಸಲು ಸೂಚನೆ ನೀಡಲಾಯಿತು.

❖ **ಕ್ರಮ : ಉಪನಿರ್ದೇಶಕರು (ಅ)/ಡಿವೈಪಿಸಿ**

ಮೇಲ್ಕಂಡ ಸ್ಥಳಗಳಿಗೆ ಭೇಟಿ ನೀಡದ ಅವಧಿಯಲ್ಲಿ ಕಂಡುಬಂದ ಲೋಪದೋಷಗಳಿಗೆ ನೀಡಿದ ಸೂಚನೆಯಂತೆ ಕ್ರಮ ವಹಿಸಿ ರಾಜ್ಯ ಕಛೇರಿಗೆ ವರದಿ ಮಾಡಲು ಸಂಬಂಧಿಸಿದ ಅಧಿಕಾರಿಗಳವರಿಗೆ ತಿಳಿಸಲಾಯಿತು.

19.3.13

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ

ಗೆ

- ✓ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್ ಕಾರ್ಯಾಲಯ, ರಾಮನಗರ ಜಿಲ್ಲೆ ಇವರಿಗೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ
- ✓ ನಿರ್ದೇಶಕರು, ಡಿಎಸ್‌ಇಆರ್‌ಟಿ, ಬೆಂಗಳೂರು ಇವರಿಗೆ ಮುಂದಿನ ಕ್ರಮಕ್ಕಾಗಿ
- ✓ ಸಹ ನಿರ್ದೇಶಕರು (ಆಡಳಿತ/ಗುಣಮಟ್ಟ/ಕಾರ್ಯಕ್ರಮ/), ಎಸ್‌ಎಸ್‌ಎ, ಬೆಂಗಳೂರು ಇವರಿಗೆ ಮುಂದಿನ ಕ್ರಮಕ್ಕಾಗಿ
- ✓ ಉಪನಿರ್ದೇಶಕರು (ಅ)/ಡಿವೈಪಿಸಿ ರಾಮನಗರ ಜಿಲ್ಲೆ ಇವರಿಗೆ ಮುಂದಿನ ಕ್ರಮಕ್ಕಾಗಿ
- ✓ ಬಿಇಒ/ಬಿಆರ್‌ಸಿ, ಮಾಗಡಿ/ರಾಮನಗರ/ಚನ್ನಪಟ್ಟಣ ತಾಲ್ಲೂಕು ಇವರಿಗೆ ಮುಂದಿನ ಕ್ರಮಕ್ಕಾಗಿ
- ✓ ಎಸ್‌ಎಸ್‌ಎ ಕಛೇರಿಯ ರಾಮನಗರ ಜಿಲ್ಲೆಯ ನೋಡಲ್ ಅಧಿಕಾರಿಗಳವರಿಗೆ ಮುಂದಿನ ಕ್ರಮಕ್ಕಾಗಿ

ಮಾಹಿತಿಗಾಗಿ

- ✓ ನಿರ್ದೇಶಕರು (ಕಾ), ಸಶಿಅ ಇವರಿಗೆ
- ✓ ನಿರ್ದೇಶಕರು, ಆರ್‌ಎಂಎಸ್‌ಎ ಇವರಿಗೆ
- ✓ ಕಛೇರಿ ಪ್ರತಿ